# ಚೆನ್ನಣ್ಣ ವಾಲೀಕಾರ

## ಅಧೋಲೋಕದ ಕವಿಯ ನೆನಪು



ವಿಕ್ರಮ ವಿಸಾಜಿ

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡದ ಚೆನ್ನಣ್ಣ ವಾಲೀಕಾರ (ಏ. 6, 1943 – ನ. 11, 2019) ಬಂಡಾಯ ಸಾಹಿತ್ಯದ ಪ್ರಮುಖ ಬರಹಗಾರರಲ್ಲೊಬ್ಬರು. ಸಾಹಿತ್ಯ ಹಾಗೂ ಚಳವಳಿಯನ್ನು ಬದುಕಿನ ಭಾಗಗಳನ್ನಾಗಿಸಿಕೊಂಡಿದ್ದ ಚೆನ್ನಣ್ಣ, ಅಪರೂಪದ ಮೇಷ್ಟ್ರೂ ಹೌದು. ಈ ವಿಶಿಷ್ಟ ಮಾನವತಾವಾದಿಯ ಬದುಕು–ಬರವಣಿಗೆಯನ್ನು ಕುರಿತ ಈ ಬರಹ, ನಮ್ಮ ಹಿಂದಿನ ತಲೆಮಾರುಗಳ ಕನ್ನಡ ಸಾಹಿತ್ಯಲೋಕ ಅಷ್ಟಾಗಿ ಗುರ್ತಿಸದ ಘನವಾದ ವ್ಯಕ್ತಿತ್ವದ ಹಲವು ಆರ್ದ್ರ ಆಯಾಮಗಳನ್ನು ಸಹೃದಯರಿಗೆ ಪರಿಚಯಿಸುತ್ತಿದೆ.

ಚೆನ್ನಣ್ಣ ವಾಲೀಕಾರ ದಲಿತ–ಬಂಡಾಯ ಘಟ್ಟದ ಪ್ರಮುಖ ಲೇಖಕರು. ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಸಂಶೋಧನೆ, ಸಂಪಾದನೆ, ಜಾನಪದ, ಪ್ರವಾಸ ಕಥನ, ಇತ್ಯಾದಿ. ಜೊತೆಗೆ ದಲಿತ ಮತ್ತು ಪ್ರಗತಿಪರ ಚಳವಳಿಗಳ ಸಂಗಾತಿ. ಜೀವನದ ಕೊನೆಯ ಕ್ಷಣದವರೆಗೂ ಬರಹ ಮತ್ತು ಚಳವಳಿ ಒಟ್ಟಿಗೆ ಒಯ್ಯುವ ದಾರಿಗಳನ್ನು ಹುಡುಕುತ್ತಲೇ ಇದ್ದರು. ಬರಹ, ತಿರುಗಾಟ, ಚಳವಳಿ ಮತ್ತು ಊಟ – ಎಲ್ಲವೂ ಅವರಿಗೆ ಪ್ರಿಯವಾದ ಸಂಗತಿಗಳೆ. ತಾನು ಹುಟ್ಟಿದ್ದು ಇವುಗಳಿಗಾಗಿ ಮಾತ್ರ ಎಂಬಂತೆ ಅನೇಕ ಸಲ ಅವರ ಬದುಕಿನ ರೀತಿ ಇರುತ್ತಿತ್ತು. ಮುಗ್ಧತೆ ಮತ್ತು ಪ್ರಗತಿಪರತೆಯ ವಿಚಿತ್ರ ಸಂಗಮ ಅವರು. ಯಾರಿಗೂ ಕೇಡನ್ನು ಬಗೆಯದ, ಜನಪದ ಕಲಾವಿದರನ್ನು ಹುಡುಕಿಕೊಂಡು ಊರೂರು ಅಲೆಯುವ, ದೇವದಾಸಿಯರ ಬವಣೆ ಕಂಡು ಕಣ್ಣೀರಿಡುವ, ಅವರ ಬಗ್ಗೆ ಸಾವಿರಾರು ಪುಟಗಳ ಮಾಹಿತಿ ಕಲೆಹಾಕುವ, ದಲಿತ ಸಂಘರ್ಷ ಸಮಿತಿಯ ಶಿಬಿರಗಳಲ್ಲಿ ಮೈದುಂಬಿ ಮಾತಾಡುವ, ಎಂ.ಎ. ಕನ್ನಡದ ತರಗತಿಗಳಲ್ಲಿ ಬಯಲಾಟದ ಪಟ್ಟುಗಳನ್ನು ಪ್ರದರ್ಶಿಸುವ, ಮನೆಯ ಮಾಳಿಗೆ ಮೇಲೆ ಶತಪಥ ತಿರುಗುತ್ತ ಹೊಸ ಕವಿತೆಗಳಿಗಾಗಿ ಹಂಬಲಿಸುವ ವಾಲೀಕಾರರು ಎಂದರೆ ಎಲ್ಲರಿಗೂ